ಗೋ ವಿಶ್ವ
Cow Universe
गौ विश्व

ಸರ್ವಜಿತ್ ಸಂವತ್ಸರ | ಭಾದ್ರಪದ | ಅಕ್ಟೋಬರ್ ೨೦೦೭ | ಸಂಪುಟ-೧ | ಸಂಚಿಕೆ-೧

ಗುರುವಾಣಿ

# ‘ಆಂತರ್ಯದ ಜಾಲ’ ಜಾಗೃತಗೊಳ್ಳಲಿ



ಪತ್ರಿಕೆಗಳು ನೂರಾರಿವೆ. ಇ-ಪತ್ರಿಕೆಗಳೂ ಹಲವಿವೆ. ಆದರೆ ಗೋವಿನ ಬಗೆಗಿನ ಪತ್ರಿಕೆ, ಅದರಲ್ಲೂ ಇ-ಪತ್ರಿಕೆ ಇಲ್ಲವೇ ಇಲ್ಲ ಎನ್ನಬಹುದೇನೋ? ಅಂಥದ್ದೊಂದು ಪ್ರಯತ್ನವಿದು.

ಭಾರತೀಯ ಸನ್ನಿವೇಶದಲ್ಲಿ ಗೋವನ್ನು ಅರಿಯಬೇಕಾದದ್ದು ಅತ್ಯಗತ್ಯ. ಏಕೆಂದರೆ, ಬಲಾಢ್ಯ ಭಾರತ ನಿರ್ಮಾಣದ ನಮ್ಮ ಕನಸಿಗೆ ಅಡಿಪಾಯವೇ ಗೋವು. ಮನುಷ್ಯ ಜೀವನದಲ್ಲಿ ಅತ್ಯಂತ ಮಹತ್ತರ ಪಾತ್ರ ವಹಿಸುವ ಜೀವಿಗೆ ನಾವು ನೀಡುತ್ತಿರುವ ಮಹತ್ವ ತೀರಾ ಕಡಿಮೆ.

ಇಷ್ಟೆಂದರೆ ಅರ್ಥವಾಗಲಿಕ್ಕಿಲ್ಲ. ಒಂದು ಉದಾಹರಣೆ, ಅಜ್ಜ ಮುಚ್ಚಿಟ್ಟ ಪೆಟ್ಟಿಗೆಯ ಕೀಲಿಕೈ ಸಿಗದಿದ್ದರೆ ನಮಗೆ ಅದರಲ್ಲಿರುವ ಮುತ್ತು-ರತ್ನಗಳು ದೊರಕವು. ಹಾಗೆಯೇ ಈ ನಿಸರ್ಗದ ಅನರ್ಘ್ಯ ರತ್ನ ಗೋವು. ಅದರ ಮಹತ್ವದ ಅರಿವೆಂಬ ಕೀಲಿಕೈ ನಮ್ಮಲ್ಲಿಲ್ಲ. ಕಾರಣ ನಮಗೆ ಅದರ ಸಿರಿ ದೊರಕುತ್ತಿಲ್ಲ.

ಅನುಮಾನವೇ ಇಲ್ಲ. ನಾವು ಮನುಷ್ಯರು ಸ್ವಾರ್ಥಿಗಳು. ನಮ್ಮ ಉದ್ಧಾರ ಆಗುತ್ತದೆ ಎಂಬುದು ಮನದಟ್ಟಾದಾಗ ಮಾತ್ರ ಯಾವುದೇ ಕಾರ್ಯಕ್ಕೆ ಮನಮಾಡುತ್ತೇವೆ. ಗೋ ಸಂರಕ್ಷಣೆಯೆಂಬುದೂ ನಮಗಾಗಿಯೇ ಆಗಬೇಕಾದ ಕಾರ್ಯ. ಇದೂ ನಮ್ಮ ಉದ್ಧಾರವೇ.

ಇನ್ನೊಂದು ಹೋಲಿಕೆ ತೆಂಗಿನ ಮರ. ತೆಂಗಿನ ಕಾಯಿಯ ಉಪಯುಕ್ತತೆ ತಿಳಿಯದವನು ಅದನ್ನು ಕಡಿದು ಸೌದೆ ಮಾಡುತ್ತಾನೆ. ತಿಳಿದವನು ಸಾಕುತ್ತಾನೆ.

*ಗೋವು ನಮ್ಮಿಂದ ಬೇಡುವುದು ಇಷ್ಟೇ*
*ಸಹಜ ಜನನ, ಸಹಜ ಬದುಕು, ಸಹಜ ಮರಣ*

ಗೋವೂ ಚಿನ್ನದ ಮೊಟ್ಟೆಯಿಡುವ ಕೋಳಿಯಂತೆ. ಬದುಕಿದ್ದಷ್ಟು ದಿನವೂ ಪ್ರಯೋಜನಕಾರಿ. ಹೆಸರೇ ಕಾಮಧೇನು, ಇದರ ಬಗ್ಗೆ ತಿಳಿದುಕೊಂಡಷ್ಟೂ ಲಾಭ ಹೆಚ್ಚು. ಲಾಭ ಖಚಿತವಾದರೆ ಸಹಜವಾಗಿ ನಾವು ಗೋವನ್ನು ಉಳಿಸುತ್ತೇವೆ; ರಕ್ಷಣೆ ಮಾಡುತ್ತೇವೆ. ಈ ತತ್ತ್ವದ ಹಿನ್ನೆಲೆಯಲ್ಲೇ ಈ ಇ-ಪತ್ರಿಕೆ ಇದೆ. ಪತ್ರಿಕೆಗಳ ಕಾರ್ಯ ಸತ್ಯದ ಮೇಲೆ ಬೆಳಕು ಚೆಲ್ಲುವುದು. ಇ-ಪತ್ರಿಕೆಯೂ ಅದನ್ನೇ ಮಾಡಲಣಿಯಾಗಿದೆ. ಗೋವಿನ ಬಗೆಗಿನ ಸತ್ಯವನ್ನು ಪಸರಿಸುತ್ತದೆ.

ಇತಿಹಾಸವನ್ನೊಮ್ಮೆ ಅವಲೋಕಿಸಿ. ಎಲ್ಲ ಯುದ್ಧಗಳಲ್ಲೂ ಪತ್ರಿಕೆಗಳು ಪ್ರಮುಖ ಪಾತ್ರ ವಹಿಸಿವೆ, ವಹಿಸುತ್ತವೆ. ಈ ಪತ್ರಿಕೆಯದೂ ಅದೇ ಹೊಣೆ. ಈಗಲೂ ಒಂದು ಮಹಾಯುದ್ಧ ಆರಂಭವಾಗಿದೆ.

**ಹೂರಣ**

ಪ್ರಶ್ನೋತ್ತರ
ಗೋಮೂತ್ರದಲ್ಲಿಯ ಔಷಧೀಯ ಗುಣಗಳು
ಮಾಸದ ಗೋವು –ಕಾಂಕ್ರೇಜ್
ಅರ್ಬುದ ರೋಗ ನಿವಾರಕ ಗೋಮೂತ್ರ
ಭಾರತೀಯ ಗೋತಳಿಯೇ ಏಕೆ?
ಆಯುರ್ವೇದದಲ್ಲಿ ಗೋವು
ಉತ್ಕೃಷ್ಟ ಸನ್ಮಾನ
ಕ್ಷೀರಪಾನ
ಕೋಟಿ ನೀರಾಜನ



ರಾಮಾಯಣ, ಮಹಾಭಾರತದಂಥ ಎರಡು ಮಹಾಯುದ್ಧಗಳನ್ನು ಜಗತ್ತು ಕಂಡಿದೆ. ಇದು ಮೂರನೇ ಮಹಾಯುದ್ಧ – ಗೋವಿಗಾಗಿನ ಧರ್ಮಯುದ್ಧ. ಇಲ್ಲಿ ಎರಡೇ ಪಕ್ಷ. ಒಂದೋ ಗೋವಿನ ಜತೆ ಇರಬೇಕು ಅಥವಾ ವಿರೋಧಪಕ್ಷದಲ್ಲಿರಬೇಕು. ತಟಸ್ಥವಾಗಿರಲು ಸಾಧ್ಯವೇ ಇಲ್ಲ. ಹೇಳಿ, ನೀವು ಎಲ್ಲಿದ್ದೀರಾ?

ವಿಶ್ವಾಸವಿದೆ, ಈ ಧರ್ಮಯುದ್ಧದಲ್ಲಿ ನೀವೆಲ್ಲರೂ ಧರ್ಮಯೋಧರಾಗುತ್ತೀರೆಂದು; ಧರ್ಮದ ಪರ ಹೋರಾಡುತ್ತೀರೆಂದು. ಜಗತ್ತಿನ ಎಲ್ಲ ಬುದ್ಧಿಜೀವಿಗಳೂ ಗೋವಿನ ಪರ ನಿಲ್ಲಬೇಕು. ಅಂಥ ಸಂದೇಶ ಹೊತ್ತು ಈ ಅಂತರಜಾಲ ಪ್ರವಹಿಸುತ್ತದೆ. ನೈಜ ಬುದ್ಧಿಜೀವಿಗಳನ್ನು ಆಂದೋಲನಕ್ಕೆ ಆಹ್ವಾನಿಸುತ್ತದೆ. ಈ ಆಂದೋಲನದ ಪ್ರತೀಕ ಗೋವು. ಇದೇ ನಮ್ಮತನ, ನಮ್ಮ ಸ್ವಾಭಿಮಾನ. ಗೋವೆಂದರೆ ಭಾರತೀಯತ್ವ.

ದುರದೃಷ್ಟ, ನಮಗೆ ನಮ್ಮದೆಲ್ಲವುಗಳ ಬಗೆಗೆ ತಿರಸ್ಕಾರ. ನಮ್ಮ ದೇಶಕ್ಕಿಂತ ವಿದೇಶ ಇಷ್ಟ. ನಮಗೆ 'ಭಾರತ'ಕ್ಕಿಂಥ 'ಇಂಡಿಯಾ' ಎಂದರೇ ಹಿತ. ಹಾಗೆಯೇ ಆಹಾರ, ಆಚಾರ, ವಿಚಾರಗಳೆಲ್ಲವು ಕೂಡ. ನೆನಪಿಡಿ, ಅವಾವುವೂ ಆಪ್ತವಾಗಲಾರವು. ನಾವು ಪರಕೀಯರ ಮತ್ತು ಪರಕೀಯ ಭಾಷೆ, ಆಚಾರಗಳ ದ್ವೇಶಿಗಳಲ್ಲ. ಆದರೆ ನಮ್ಮದನ್ನು ನಮ್ಮತನವನ್ನು ನಾವು ಮರೆಯಬಾರದು ಪರಕೀಯರ ಒಳ್ಳೆಯದನ್ನು ಗೌರವಿಸೋಣ.

ಆದರೆ ನಮ್ಮದನ್ನು ತಿರಸ್ಕರಿಸುವುದು ಬೇಡ. ನಮ್ಮ ದೇಶ, ಸಂಸ್ಕೃತಿ, ಭಾಷೆ, ಪರಂಪರೆ –ಇವುಗಳ ಬಗ್ಗೆ ಪ್ರೀತಿ ಬೆಳೆಯಲಿ. ಇವುಗಳ ಬಗ್ಗೆ ವಿಮರ್ಶೆಯೂ ಆಗಲಿ. ಇಂಥ ಸ್ವಾಭಿಮಾನದ ಒಂದು ದೀರ್ಘಕಾಲಿಕ ಆಂದೋಲನಕ್ಕೆ ಗೋವು ಪ್ರತೀಕ.

ಗೋವು ದನ ಮಾತ್ರವಲ್ಲ. ಅದು ಧನವೂ ಹೌದು, ಸಾಧನವೂ ಹೌದು. ರಾಷ್ಟ್ರ ಪರಿವರ್ತನೆಯ, ವಿಶ್ವ ಪರಿವರ್ತನೆಯ ಸಾಧನ. ಕೃತಕತೆಯಿಂದ ಸಹಜತೆಯೆಡೆಗೆ ಸಾಗುವ ಸಾಧನ.

ಉಪನಿಷತ್ತಿನಲ್ಲಿ ಹೇಳಿದೆ. ವಿವೇಕಾನಂದರೂ ಅದನ್ನೇ ಪುನರುಚ್ಚರಿಸಿದರು –"ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ಮುನ್ನಡೆಯಿರಿ". ನಿಮ್ಮ ಬದುಕಿನ ಅಸ್ಥಿಭಾರ ಅಲುಗಾಡುತ್ತಿದೆ. ನಾಶವಾಗುತ್ತಿದೆ. ಕಣ್ತೆರೆದು ಒಮ್ಮೆ ನೋಡಿ ಅದನ್ನು. ನಮ್ಮ ಹಿಂದೆ, ಮುಂದೆ, ಜತೆಯೇ ಇದೆ ಗೋವು. ಅದೇ ನಶಿಸಿದರೆ, ನಮ್ಮ ಬದುಕೂ ನಶಿಸುತ್ತದೆ. ಏಳಿ. ಎಚ್ಚರಗೊಳ್ಳಿ. ಗೋವನ್ನು ರಕ್ಷಿಸಿ, ನಿಮ್ಮನ್ನೂ ರಕ್ಷಿಸಿಕೊಳ್ಳಿ. 'ಈ–ಪತ್ರಿಕೆ' ಆ ಕರೆ ನೀಡುತ್ತಿದೆ. ಅದು ಜಗದಗಲ ಮೊರೆಯಲಿ. ಜಾಗೃತಿ ಮನದಲ್ಲಿ ಮನೆಯಾಗಲಿ.

**–ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ, ಶ್ರೀ ಸಂಸ್ಥಾನ ಗೋಕರ್ಣ, ಶ್ರೀ ರಾಮಚಂದ್ರಾಪುರ ಮಠ, ಹೊಸನಗರ**

## ಪ್ರಶ್ನೋತ್ತರ

ಪ್ರ: ಭೋಪಾಲ್ ಅನಿಲ ದುರಂತ, ಲಾತೂರ್ ಭೂಕಂಪದ ಸಂದರ್ಭದಲ್ಲಿ ಗೋವಿನ ಪಾತ್ರ ಏನು?
ಉ: ಭೋಪಲ್ ಅನಿಲ ದುರಂತ ಸಂದರ್ಭದಲ್ಲಿ ಅಗ್ನಿಹೋತ್ರ ನಡೆಯುತ್ತಿದ್ದ, ಸೆಗಣಿಯಿಂದ ಸಾರಿಸಿದ್ದ ಒಂದು ಮನೆಯಲ್ಲಿದ್ದ ಸದಸ್ಯರಿಗೆ ಏನೂ ಆಗದಿದ್ದದು ದಾಖಲೆ. ಅದೇರೀತಿ ಲಾತೂರ್ ಭೂಕಂಪದ ಸಂದರ್ಭಗಳಲ್ಲಿ ಕಟ್ಟಿ ಹಾಕದೆ ಸಹಜವಾಗಿ ಅಡ್ಡಾಡುತ್ತಿದ್ದ ಯಾವ ಗೋವಿಗೂ ಏನೂ ಆಗಿಲ್ಲ.

ಪ್ರ: ಅಣುವಿಕಿರಣ ತಡೆಗೆ ಗೋಮಯ ಹೇಗೆ ಪೂರಕ? ಉದಾಹರಣೆ ಇದೆಯೆ?
ಉ: ಅಣುಶಕ್ತಿ ಕೇಂದ್ರಗಳ ಗೋಡೆಗಳಿಗೆ ಸೆಗಣಿಯಿಂದ ಸಾರಿಸಿದಲ್ಲಿ ಅದು ಅಣು ಪ್ರಸರಣವನ್ನು ತಡೆಯುತ್ತದೆ. ಮುಂಬೈಯ ಟ್ರಾಂಬೆಯಲ್ಲಿರುವ ಪರಮಾಣು ಸಂಶೋಧನಾ ಕೇಂದ್ರದಲ್ಲಿ ಈ ರೀತಿ ಮಾಡಿದ್ದಾರೆ, ಮಾತ್ರವಲ್ಲ ರಷ್ಯಾದ ಪರಮಾಣು ಸಂಶೋಧನಾ ಕೇಂದ್ರದಲ್ಲೂ ಕೂಡ ಈ ರೀತಿ ಮಾಡಿದ್ದಾರೆ.

ಪ್ರ: ಭಾರತೀಯ ಗೋವಿನಲ್ಲಿ ಎಷ್ಟು ವಿಧ ಯಾವುವು?
ಉ: ಪ್ರಾಕೃತಿಕ ಲಕ್ಷಣ ಹಾಗೂ ಕೆಲಸದ ಆಧಾರದ ಮೇಲೆ ಭಾರತೀಯ ಗೋವನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ – ಹಾಲಿನ ತಳಿ, ಶ್ರಮದ ತಳಿ, ದ್ವಿ–ಉದ್ದೇಶದ ತಳಿ.

ಪ್ರ: ನಮ್ಮ ದೇಶದಲ್ಲಿ ಅತಿ ಹಚ್ಚು ಹಾಲು ನೀಡುವ ತಳಿ ಯಾವುದು?
ಉ: ಪ್ರಸ್ತುತ ಪಂಜಾಬಿನ ಸಾಹಿವಾಲ್ ತಳಿ ಅತಿ ಹೆಚ್ಚು ಹಾಲು ನೀಡುವ ದಾಖಲೆಯಲ್ಲಿದೆ. ನಂತರದ ಸ್ಥಾನಗಳಲ್ಲಿ ಥಾರ್ ಪಾರ್ ಕರ್ ಹಾಗೂ ಗೀರ್ ಬರುತ್ತವೆ.

ಪ್ರ: ಯುದ್ಧ ಕಾಲದಲ್ಲಿ ಬಳಸುವ ತಳಿ ಯಾವುದು?
ಉ: ಕರ್ನಾಟಕದ ಮೈಸೂರು ಪ್ರದೇಶದ ಅಮೃತ ಮಹಲ್ (ಬೆಣ್ಣೆ ಚಾವಡಿ) ತಳಿಯ ಎತ್ತುಗಳನ್ನು ಯುದ್ಧ ಕಾರ್ಯಗಳಿಗೆ ಬಳಸುತ್ತಿದ್ದರು. ಮೈಸೂರಿನ ಅರಸರ ಹಾಗೂ ಹೈದರಾಲಿಯ ಸೈನ್ಯದಲ್ಲಿ ಈ ತಳಿಯ ಎತ್ತುಗಳ 'ಬಂಜಾರ' ದಳವಿತ್ತು.

# ಭಾರತೀಯ ಗೋವಂಶದ ಮೂತ್ರದಲ್ಲಿರುವ ವಿಶೇಷ ಔಷಧೀಯ ಗುಣಗಳು

೧. ಯೂರಿಯಾ: ಮಾನವ ಶರೀರವು ಪ್ರೋಟೀನನ್ನು ಬಳಸಿ ಕೊನೆಯಲ್ಲಿ ಉಳಿಯುವ ಶೇಷವೇ ಯೂರಿಯಾ ಆಗಿರುತ್ತದೆ. ಇದು ಒಂದು ಪ್ರಬಲವಾದ ಬ್ಯಾಕ್ಟೀರಿಯಾ ನಿರೋಧಕ ವಸ್ತುವಾಗಿರುತ್ತದೆ.

೨. ಯೂರಿಕ್ ಆ್ಯಸಿಡ್: ಬ್ಯಾಕ್ಟೀರಿಯಾ ನಿರೋಧಕ ಗುಣವಿರುತ್ತದೆ. ಮತ್ತು ಇದು ಕ್ಯಾನ್ಸರ್ ಕಾರಕ ಬ್ಯಾಕ್ಟೀರಿಯಾವನ್ನು ನಿಯಂತ್ರಿಸಲು ಸಹಕರಿಸುತ್ತದೆ.

೩.ಖನಿಜಗಳು: ಹೆಚ್ಚಿನ ಪ್ರಮಾಣ ಮತ್ತು ಅಧಿಕ ರೀತಿಯ ಹಾಗೂ ವೈವಿಧ್ಯಮಯ ಖನಿಜಾಂಶಗಳನ್ನು ಹೊಂದಿರುತ್ತದೆ.

೪.ಯುರೋಕಿನಾಸ್: ಹೆಪ್ಪುಗಟ್ಟಿದ ರಕ್ತವನ್ನು ಕರಗಿಸಲು ಸಹಕಾರಿ. ಹೃದ್ರೋಗಗಳ ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿದೆ. ರಕ್ತಸಂಚಾರವನ್ನು ಉತ್ತಮಗೊಳಿಸುತ್ತದೆ.

೫. ಎಪಿಥೀಲಿಯಮ್ ಗ್ರೋತ್ ಫ್ಯಾಕ್ಟರ್: ಹಾನಿಗೊಳಗದ ಟಿಶ್ಯೂ ಮತ್ತು ಜೀವಕೋಶಗಳ ರಿಪೇರಿ ಮತ್ತು ಅವುಗಳ ಪುನರ್ರಚನೆ.

೬. ಕಾಲೋನಿ ಸ್ಟಿಮ್ಯುಲೇಟಿಂಗ್ ಫ್ಯಾಕ್ಟರ್: ಕೋಶವಿಭಜನೆ ಹಾಗೂ ಜೀವಕೋಶಗಳ ಸಂಖ್ಯೆಯನ್ನು ಹೆಚ್ಚಿಸುವುದು.

೭. ಗ್ರೋಥ್ ಹಾರ್ಮೋನ್ : ದೇಹದಲ್ಲಿ ಪ್ರೋಟೀನ್ ಗಳ ಉತ್ಪತ್ತಿ, ಮೃದ್ವಸ್ಥಿಗಳ ಬೆಳವಣಿಗೆ, ಕೊಬ್ಬನ್ನು ಕರಗಿಸುವ ಕಾರ್ಯ ಮುಂತಾದ ಬಯೋ ಆ್ಯಕ್ಟಿವ್ ಕ್ರಿಯೆಗಳು.

೮. ಎರಿಥ್ರೋಪ್ರೋಟೀನ್: ಕೆಂಪು ರಕ್ತಕಣಗಳ ಉತ್ಪತ್ತಿ.

೯. ಗೊನೇಡೋಟ್ರೋಪಿನ್ಸ್: ಸ್ತ್ರೀಯರಲ್ಲಿ ಋತು ಸಂಬಂಧವಾದ ಕಾಲ ವ್ಯತ್ಯಯಗಳನ್ನು ಸರಿಗೊಳಿಸುವುದು ಮತ್ತು ಪುರುಷರಲ್ಲಿ ವೀರ್ಯವರ್ಧಕವಾಗಿ ಕಾರ್ಯನಿರ್ವಹಿಸುವುದು.

೧೦. ಟ್ರಿಪ್ಸಿನ್ ಇನ್ ಹಿಬಿಟರ್: ಸ್ನಾಯುಗಳಲ್ಲಿ ಬೆಳೆಯುವ ವ್ರಣ ಹಾಗೂ ಗಡ್ಡೆಗಳನ್ನು ತಡೆಗಟ್ಟುವುದು ಮತ್ತು ಗುಣಪಡಿಸುವುದು.

೧೧. ಅಜೆಂಟೋಯಿನ್: ಗಾಯಗಳನ್ನು ಮತ್ತು ಹುಣ್ಣುಗಳನ್ನು ಗುಣಪಡಿಸುವಲ್ಲಿ ಸಹಕಾರಿ.

೧೨. ಆ್ಯಂಟಿ ಕ್ಯಾನ್ಸರ್ ಗುಣ: ಗೋವಿನ ಗಂಜಳದಲ್ಲಿರುವ ಆ್ಯಂಟನಿಯೋಪ್ಲಾಸ್ಟನ್ , ಹೆಚ್ -೧೧ ಬೀಟಾ ಅಯೋಡೋಲ್ – ಅಸಿಟಿಕ್ ಆ್ಯಸಿಡ್ ಡೈರೆಕ್ಟೈನ್ ೩-ಮೆಥಿಲ್ ಗ್ಲೋಕ್ಸಲ್ ಮುಂತಾದವುಗಳು.

೧೩. ನೈಟ್ರೋಜನ್ (ಸಾರಜನಕ): ಇದು ಮೂತ್ರಪಿಂಡದ ನೈಜ ಆರೋಗ್ಯವನ್ನು ಕಾಪಾಡುತ್ತದೆ, ಮಾತ್ರವಲ್ಲ ಮೂತ್ರದ ಚಲನೆಯನ್ನು ನಿಯಮಬದ್ಧಗೊಳಿಸುತ್ತದೆ.

೧೪. ಸಲ್ಫರ್ (ಗಂಧಕ): ಕರುಳಿನಲ್ಲಿ ಆಹಾರದ ಚಲನೆಯ ವೇಗ ವರ್ಧನೆ ಮತ್ತು ರಕ್ತ ಶುದ್ಧಿ.

೧೫. ಅಮೋನಿಯಾ: ದೇಹದ ಅಂಗಾಂಶ (ಟಿಶ್ಯೂ)ಗಳು ಮತ್ತು ಇವುಗಳ ಸಹಜ ಸಂಬಂಧ ಹಾಗೂ ಹೊಂದಾಣಿಕೆ .

೧೬. ತಾಮ್ರ: ದೇಹದಲ್ಲಿ ಕೊಬ್ಬು ಅತಿಯಾಗಿ ಶೇಖರವಾಗದಂತೆ ತಡೆಗಟ್ಟುತ್ತದೆ.

೧೭. ಕಬ್ಬಿಣ: ವ್ಯಕ್ತಿಯಲ್ಲಿ ಓಜಸ್ಸನ್ನು ಮತ್ತು ರಕ್ತದಲ್ಲಿರುವ ಕೆಂಪು ರಕ್ತ ಕಣಗಳ ಸಂಖ್ಯೆಯನ್ನು ಗರಿಷ್ಟ ಮಟ್ಟದಲ್ಲಿಡಲು ಸಹಕರಿಸುವುದು.

೧೮. ಫಾಸ್ಫೇಟ್ (ರಂಜಕ): ಕಿಡ್ನಿ ಮತ್ತು ಗಾಲ್ ಬ್ಲ್ಯಾಡರ್ ಗಳಲ್ಲಿ ಕಲ್ಲುಗಳುಂಟಾಗದಂತೆ ತಡೆಯುತ್ತದೆ.

೧೯. ಸೋಡಿಯಂ: ರಕ್ತ ಶುದ್ಧಿಗೆ ಸಹಕರಿಸುತ್ತದೆ ಮತ್ತು ಆಮ್ಲಪಿತ್ತವಿಕಾರವಾಗದಂತೆ ತಡೆಗಟ್ಟುತ್ತದೆ.

೨೦. ಪೊಟ್ಯಾಷಿಯಂ: ಬಾಯಿಯ ರುಚಿಯನ್ನು ವರ್ಧಿಸುತ್ತದೆ ಮತ್ತು ಸ್ನಾಯುಗಳ ದಣಿವನ್ನು ನಿವಾರಿಸುತ್ತದೆ.

೨೧. ಮೆಗ್ನೀಸಿಯಂ: ಇದು ಬ್ಯಾಕ್ಟೀರಿಯಾ ನಿರೋಧಕ ಮತ್ತು ಆಮ್ಲ ಹುಣ್ಣು (ಗ್ಯಾಸ್ ಗ್ಯಾಂಗ್ರೀನ್) ಆಗದಂತೆ ತಡೆಗಟ್ಟುತ್ತದೆ.

೨೨. ಕಾರ್ಬೋಲಿಕ್ ಆ್ಯಸಿಡ್: ಇದು ಬ್ಯಾಕ್ಟೀರಿಯಾ ನಿರೋಧಕ ಮತ್ತು ಗ್ಯಾಸ್ ಗ್ಯಾಂಗ್ರೀನ್ ತಡೆಗಟ್ಟುತ್ತದೆ.

೨೩. ಕ್ಯಾಲ್ಸಿಯಂ: ಇದು ರಕ್ತಶುದ್ಧಿಕಾರಕ ಮತ್ತು ಮೂಳೆಗಳಿಗೆ ಪೋಷಕಾಂಶಗಳನ್ನೊದಗಿಸುತ್ತದೆ. ರಕ್ತ ಹೆಪ್ಪುಗಟ್ಟುವಿಕೆಗೆ ಸಹಾಯ ಮಾಡುತ್ತದೆ.

೨೪. ಲವಣಗಳು: ಬ್ಯಾಕ್ಟೀರಿಯಾ ನಿರೋಧಕ ಮತ್ತು ಪ್ರಜ್ಞಾಹೀನರಾಗದಂತೆ ರಕ್ಷಿಸುತ್ತದೆ.

೨೫. ಎ.ಬಿ.ಸಿ.ಡಿ.ಇ. ವಿಟಮಿನ್ ಗಳು: ಇವುಗಳು ಅತಿಯಾದ ಬಾಯಾರಿಕೆಯಾಗದಂತೆ ರಕ್ಷಿಸುತ್ತವೆ. ಚೈತನ್ಯವನ್ನು ತುಂಬುತ್ತವೆ ಮತ್ತು ವೀರ್ಯವೃದ್ಧಿಯನ್ನು ಮಾಡುತ್ತವೆ.

೨೬. ಲ್ಯಾಕ್ಟೋಸ್ ಷುಗರ್: ಹೃದಯಕ್ಕೆ ಸಾಮರ್ಥ್ಯವನ್ನು ತುಂಬುತ್ತವೆ. ಅತಿಯಾದ ದಾಹ ಹಾಗೂ ತಲೆಸುತ್ತು ಬಾರದಂತೆ ನೋಡಿಕೊಳ್ಳುತ್ತದೆ.

೨೭. ಎನ್ಜಾಯಿಂಗಳು (ರಸಧಾತುಗಳು): ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತವೆ. ಜೀರ್ಣರಸಗಳ ಸ್ರವಿಸುವಿಕೆಯನ್ನು ಗರಿಷ್ಟ ಮಟ್ಟದಲ್ಲಿರುವಂತೆ ನೋಡಿಕೊಳ್ಳುತ್ತವೆ.

೨೮. ನೀರು: ಶರೀರದ ಶಾಖವನ್ನು ನಿಯಂತ್ರಿಸುತ್ತದೆ. ಮತ್ತು ರಕ್ತದ ದ್ರಾವಕ ಗುಣವನ್ನು ಕಾಯ್ದುಕೊಳ್ಳುತ್ತದೆ.

೨೯. ಹಿಪ್ಪೂರಿಕ್ ಆ್ಯಸಿಡ್: ದೇಹದಲ್ಲಿರುವ ವಿಷಾಂಶಗಳನ್ನು (ಟಾಕ್ಸಿನ್) ಮೂತ್ರದ ಮೂಲಕ ಹೊರಗೆ ಹಾಕುತ್ತದೆ.

೩೦. ಕ್ರಿಯೇಟಿನಿನ್: ಇದು ಬ್ಯಾಕ್ಟೀರಿಯಾ ನಿರೋಧಕ ಗುಣವನ್ನು ಹೊಂದಿರುತ್ತದೆ.

೩೧. ಸ್ವರ್ಣಕ್ಷಾರ: ಬ್ಯಾಕ್ಟೀರಿಯಾ ನಿರೋಧಕ. ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ ಮತ್ತು ವಿಷಾಫಹಕ ಗುಣವನ್ನು ಹೋಂದಿದೆ.

೩೨. ಗೋಮೂತ್ರವು ಗಾಯಗಳನ್ನು ಬೇಗ ಗುಣಪಡಿಸುತ್ತದೆ.

೩೩. ಗೋಮೂತ್ರದಲ್ಲಿರುವ ರಾಸಾಯನಿಕ ತತ್ವವು ದೇಹದ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ. ಹಾಗೂ ವಿವಿಧ ಇತರ ಔಷಧಿಗಳೊಂದಿಗೆ ಶಕ್ತಿವರ್ಧನೆ ಮಾಡುತ್ತದೆ.

**ಗೋಮೂತ್ರದಲ್ಲಿ**

**– ನೀರು– ೯೫%, ಯೂರಿಯಾ–೨.೫% ಇತರ ೨.೫%**

**ಮಾಸದ ಗೋವು**

# ಕಾಂಕ್ರೇಜ್

ನೀವು ಕಳೆದ ಎಪ್ರಿಲ್‌ನಲ್ಲಿ ಹೊಸನಗರದಲ್ಲಿ ಜರುಗಿದ ವಿಶ್ವ ಗೋ ಸಮ್ಮೇಳನಕ್ಕೆ ಬಂದವರಾಗಿದ್ದರೆ, ಸಭಾಂಗಣದ ಮಧ್ಯದಲ್ಲಿ, ಸಮ್ಮೇಳನಕ್ಕಾಗಿ ಬಂದ ದೈವಪ್ರತಿನಿಧಿಯೋ ಎಂಬಂತೆ ಶಾಂತ, ಗಂಭೀರ ಸ್ವಭಾವಗಳ ಮೂರ್ತರೂಪವಾದ ಹೋರಿಯೊಂದನ್ನು ನೋಡಿರುತ್ತೀರಿ, ಕಣ್ಣರಳಿಸಿರುತ್ತೀರಿ, 'ಒಹ್' ಎನ್ನುವಂತದ್ದೊಂದು ಉದ್ಗಾರ ಹೊರಡಿಸಿರುತ್ತೀರಿ. ಆಸ್ತಿಕರಾದರೆ ಪ್ರತ್ಯಕ್ಷ ನಂದಿಯನ್ನೆ ಕಂಡೆನೋ ಎನ್ನುವ ದಿವ್ಯ ಆನಂದವೊಂದು ನಿಮ್ಮ ಹೃದಯವನ್ನು ತುಂಬಿರಲೂ ಸಾಕು. ಹಾಗೆ ಕೇವಲ ಉಪಸ್ಥಿತಿಯೊಂದರಿಂದಲೆ ನೋಟಕನ ಗೋಪ್ರೇಮವನ್ನು ಜಾಗೃತಗೊಳಿಸಬಲ್ಲ ಗೋವೇ ಶ್ರೀಮಠದ "ಸಾಮ್ರಾಟ್".

ಸಾಮ್ರಾಟ್ ಭಾರತದ ಅಳಿದುಳಿದ ೩೨ ಅತ್ಯಮೂಲ್ಯ ತಳಿಗಳಲ್ಲೊಂದಾದ ಕಾಂಕ್ರೇಜ್ ಜಾತಿಗೆ ಸೇರಿದ್ದು. ಅಹ್ಮದಾಬಾದ್‌ನ ಶ್ರೀ ಜಗನ್ನಾಥ ಮಂದಿರದ ಗೋಶಾಲೆಯಲ್ಲಿ ಗಾಡಿ ಎಳೆಯುತ್ತಿದ್ದ ಈ ಚೆಲುವ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರ ಚಿತ್ತವನ್ನು ಮೊದಲ ನೋಟಕ್ಕೇ ಸೆಳೆದುದರಿಂದ ಕಳೆದ ಮಾರ್ಚಿನಲ್ಲಿ ಶ್ರೀಮಠಕ್ಕೆ ಈತನ ಬರೋಣವಾಯಿತು. ಭಯಹುಟ್ಟಿಸುವಂತೆ ೭-೮ ಅಡಿಗಳಷ್ಟು ಎತ್ತರ, ಒಂದು ಮೀಟರ್‌ನಷ್ಟು ಕೋಡು ಹೊಂದಿದ್ದರೂ ಪರಮ ಶಾಂತ ಸ್ವಭಾವದ ೧೮ರ ಹರೆಯದ ಈತ ಬಂದ ಕೆಲದಿನಗಳಲ್ಲೇ ಶ್ರೀಮಠದ ಭಕ್ತರ ಅಚ್ಚುಮೆಚ್ಚಿನವನಾಗಿದ್ದ.

ಕಾಂಕ್ರೇಜ್ ತಳಿಯ ಗೋವುಗಳೆ ಹಾಗೆ, ಬೃಹದಾಕಾರವಾದರೂ ಅತ್ಯಂತ ಶಾಂತ ಸ್ವಭಾವದವು. ಭಾರತದ ಮೂಲ ತಳಿಗಳಲ್ಲಿ ಕಾಂಕ್ರೇಜ್ ಕೂಡ ಒಂದು. ಶಿಲಾಯುಗದ ಕೆತ್ತನೆಗಳಲ್ಲಿ, ಹರಪ್ಪಾ -ಮೊಹಂಜದಾರೊನ ಶಿಲ್ಪಗಳಲ್ಲಿ ಕಾಣಸಿಗುವ ಗೋವಿನ ಚಿತ್ರ ಕಾಂಕ್ರೇಜ್‌ನದೇ ಎಂಬುದಕ್ಕೆ ಆಧಾರಗಳಿವೆ. ಸಾಮಾನ್ಯವಾಗಿ ಬೂದು, ಅಪರೂಪಕ್ಕೆ ನಸುಕಪ್ಪು ಬಣ್ಣದ ಇವುಗಳು ಉಬ್ಬಿದಂತಿರುವ ಸಣ್ಣ ಮೂಗು, ನೀಳವಾದ ನೇತಾಡುವ ಕಿವಿ, ಗಟ್ಟಿಯಾದ ನಿಡಿದಾದ ಕೊಂಬನ್ನು ಹೊಂದಿರುತ್ತವೆ. ಹೋರಿಗಳು ಭುಜ, ತೊಡೆ ಮತ್ತು ಕಾಲುಗಳಲ್ಲಿ ಕಪ್ಪು ಬಣ್ಣ ಹೊಂದಿರುವುದು ವಿಶೇಷ.



ಗುಜರಾತ್‌ನ ಕಛ್ ಹಾಗು ರಾಜಸ್ಥಾನದ ಜೋಧಪುರ ಪ್ರಾಂತ್ಯ ಇವುಗಳ ತವರೂರು. ಈ ತಳಿಯ ಗೋವುಗಳನ್ನು ಕೆಲಸಗಾರ ತಳಿಯಾಗಿಯೂ ಹಾಲಿನ ತಳಿಯಾಗಿಯೂ (ಉಭಯ) ಬಳಸಬಹುದೆನ್ನುತ್ತಾರೆ ಅಲ್ಲಿನ ಸಂತೃಪ್ತ ಹೈನುಗಾರರು. ಅಲ್ಲಿಂದ ಶ್ರೀಮಠ ನೂರಕ್ಕೂ ಹೆಚ್ಚಿನ ಗೊವುಗಳನ್ನು ತಂದು ರಾಜ್ಯದಾದ್ಯಂತ ವಿತರಿಸಿದೆ. ರಾಜಸ್ತಾನದಲ್ಲಿ ದಿನಕ್ಕೆ ೮-೧೦ ಲೀಟರ್‌ಗಳಷ್ಟು ಹಾಲು ಸುರಿಸುವ ಇವು ಕರ್ನಾಟಕದಲ್ಲಿ ೧೦-೧೨ ಲೀಟರ್ ಕೊಡುತ್ತಿರುವ ಉದಾಹರಣೆಗಳಿವೆ ಎಂದು ತಿಳಿದರೆ ಕವಿಗಳು "ಜೇನಿನ ಹೊಳೆಯೋ, ಹಾಲಿನ ಮಳೆಯೊ" ಎಂದು ಕೌಳಿಗೆ ಹಾಲು ಕುಡಿದು ಉಚ್ಚ ಕಂಠದಿಂದ ಹಾಡಿಯಾರು!



**ಕಾಂಕ್ರೇಜ್, ರಾಜಸ್ಥಾನ, ಗುಜರಾತ್**

ವಿಶ್ವದ ಅತ್ಯಂತ ದೊಡ್ಡ ಗೋಶಾಲೆ ಘತಮೆಡಾದ ಶ್ರೀ ಗೊಪಾಲ ಗೋವರ್ಧನ ಗೋಧಾಮದಲ್ಲಿ ಎರಡು ವರ್ಷಕ್ಕೆ ಮೊದಲು ಕಾಂಕ್ರೇಜ್ ತಳಿಯ ಗೋವುಗಳು ಸುಮಾರು ಎರಡೂವರೆ ಲಕ್ಷದಷ್ಟಿದ್ದವು. ಇತ್ತೀಚಿನ ಉತ್ತಮ ೨ ಮಳೆಗಾಲದ ನಂತರ ರೈತರುಗಳು ಇಲ್ಲಿಂದ ಈ ಗೋವುಗಳನ್ನು ತೆಗೆದುಕೊಂಡು ಹೋದುದರಿಂದ ಅವುಗಳ ಸಂಖ್ಯೆ ಒಂದು ಲಕ್ಷಕ್ಕಿಳಿದಿವೆ. ವಿದೇಶಿ ತಳಿಗಳ ಭರಾಟೆಯ ಮಧ್ಯದಲ್ಲೂ ಇವುಗಳ ಪ್ರಭಾವ ಅದೆಷ್ಟಿದೆಯೆಂದು ಇದರಿಂದ ಅಂದಾಜಿಸಬಹುದು.

**– ಮಧುಕೇಶ ದೊಡ್ಡೇರಿ**

*ಗೋವುಗಳಲ್ಲಿ ಪಾಪವೆಂಬುದೇ ಇಲ್ಲ,*
*ಕಟುಕರಿಗೆ ಪುಣ್ಯಪಾಪಗಳೆರಡೂ ಗೊತ್ತಿಲ್ಲ.*

*ಗೋವೇ ಭಾರತೀಯರಿಗೆ ವಿಶೇಷ,*
*ನಾವೇ ತಡೆಯಬೇಕದರ ವಿನಾಶ.*

*ಗೋವೇ ನಮ್ಮ ದೇಶದ ಸಂಪತ್ತು,*
*ನಾವೇ ತಡೆಯಬೇಕದರ ಆಪತ್ತು.*

# ಅರ್ಬುದ ರೋಗ ನಿವಾರಕ ಗೋಮೂತ್ರ

ಗೋಮೂತ್ರವು ಅರ್ಬುದ ರೋಗವನ್ನು ಗುಣಪಡಿಸುತ್ತದೆ ಹಾಗೂ ಅರ್ಬುದ ರೋಗ ನಿವಾರಕ ಔಷದೀಗಳ ಬಲವೃದ್ಧಿ ಮಾಡುತ್ತದೆ ಎಂಬ ವಿಷಯವು ಇತ್ತೀಚಿನ ದಿನಗಳಲ್ಲಿ, ಸಂಶೋಧನಾ ವರದಿಗಳ ಆಧಾರದಲ್ಲಿ ನಿಜ ಎಂದು ಕಂಡುಬರುತ್ತದೆ. ಈ ವಿಷಯದ ಮೇಲೆ CSIR [Central Institute of Medicinal and Aromatic Plants - CIMAP], ಲಕ್ನೋ ಹಾಗೂ ಗೋವಿಜ್ಞಾನ ಅನುಸಂಧಾನ ಕೇಂದ್ರ, ನಾಗಪುರದ ತಜ್ಞರು ಅಮೇರಿಕಾದ ಪೇಟೆಂಟ್ (U.S. Patent no. 6896907) ಪಡೆದುಕೊಂಡಿದ್ದಾರೆ. ನಮ್ಮ ದೇಶದ ವಿಜ್ಞಾನಿಗಳ ನಿರಂತರ ಸಂಶೋಧನೆಯಿಂದ ಬಂದ ಮಾಹಿತಿಗಳ ಆಧಾರದಲ್ಲಿ ಈ ಕೆಳಗಿನ ಪ್ರಮುಖ ಗುಣಗಳು ಅರ್ಬುದ ರೋಗನಿವಾರಣೆಗೆ ಸಹಕಾರಿ ಎಂದು ಕಂಡುಬಂದಿದೆ.

- **ಕ್ರಿಮಿನಾಶಕ ಗುಣ–** ಗೋಮೂತ್ರವು ಹಲವು ಬ್ಯಾಕ್ಟೀರಿಯಾ, ವೈರಸ್ ಗಳನ್ನು ನಾಶಮಾಡುವ ಗುಣಹೊಂದಿದೆ. ಅರ್ಬುದ ರೋಗಕ್ಕೆ ವೈರಸ್ ಗಳು ಕಾರಣವಾಗುತ್ತವೆ.

- **ಮೌಲ್ಯವರ್ಧಕ ಗುಣ** (Bio-enhancing)– ಗೋಮೂತ್ರವು ಹಲವು ಔಷಧಿಗಳ ಗುಣವನ್ನು ವರ್ಧಿಸುತ್ತದೆ. ಹಾಗಾಗಿ ವಿಷಯುಕ್ತ. ರಾಸಾಯನಿಕಗಳ ಪ್ರಮಾಣ ಹಾಗೂ ದಿನ ಕಡಿಮೆ ಸಾಕಾಗುತ್ತದೆ.ಆದ್ದರಿಂದ ಹಣವೂ ಉಳಿತಾಯ. ಸಮಯುವೂ ಉಳಿತಾಯ.

- **ರೋಗನಿರೋಧಕ ಶಕ್ತಿವರ್ಧಕ ಗುಣ** (Immunomodulating activity) – ಗೋಮೂತ್ರವು ದೇಹದ ರೋಗನಿರೋಧಕ ಗುಣವನ್ನು ಹೊಂದಿರುವಂಥಹ ಬಿಳಿ ರಕ್ತ ಕಣಗಳಾದ ಮಾಕ್ರೋಫೇಜಸ್ (Microphages), ಲಿಂಪೋಸೈಟ್‌ಗಳ (Lymphosites) ಸಂಖ್ಯೆ, ಚಟುವಟಿಕೆಗಳನ್ನು ವರ್ಧಿಸುತ್ತದೆ. ಈ ಜೀವಕೋಶಗಳು ಅರ್ಬುದ ಜೀವಕೋಶಗಳನ್ನು ನಾಶಮಾಡುತ್ತದೆ. ದೇಹದ ಎಲ್ಲ ಜೀವಕೋಶಗಳನ್ನು ಉತ್ತೇಜನಗೊಳಿಸುತ್ತದೆ.

- **ಆಯುಸ್ಸು ವರ್ಧಕ ಗುಣ** – ರಕ್ತದಲ್ಲಿ ಅಂಡಲೆಯುವ ಜೀವಕೋಶಗಳ ಸಂಖ್ಯೆ ಅಧಿಕವಾಗುತ್ತದೆ. ಇವುಗಳು ದೇಹದ ಆರೋಗ್ಯಕರ ಜೀವಕೋಶಗಳನ್ನು ,ಎನ್ ಜೈಮುಗಳನ್ನು ಚಟುವಟಿಕೆಯನ್ನು ಹಾಳು ಮಾಡುತ್ತದೆ. ಹಾಗಾಗಿ ಮುಪ್ಪು ಬರುತ್ತದೆ. ಗೋಮೂತ್ರವು ಈ ಅಂಡಲೆಯುವ ಜೀವಕೋಶಗಳನ್ನು ನಿಯಣತ್ರಣದಲ್ಲಿಡುವ ಕಾರಣ ದೇಹದ ಯೌವನ ಕಾಪಾಡುತ್ತದೆ. ಈ ಅಂಡಲೆಯುವ ಜೀವಕೋಶಗಳು (Free radicals) ಕಾನ್ಸರ್‌ಗೂ ಕಾರಣವಾಗುತ್ತದೆ.

- **ಡಿ.ಎನ್.ಎ.** (DNA) ಸರಿಪಡಿಸುವ ಗುಣ– ಜೀವಕೋಶಗಳ ಒಳಗಿನ ಡಿಎನ್ ಎಯು ವ್ಯತ್ಯಾಸಗೊಳ್ಳುವುದು ಅರ್ಬುದ ರೋಗಕ್ಕೆ ಒಂದು ಕಾರಣವಾಗಿದೆ. ಡಿಎನ್ಎ ವ್ಯತ್ಯಾಸಗೊಳ್ಳುವುದರಿಂದಾಗಿ ಜೀವಕೋಶಗಳು ಅನಿಯಂತ್ರಿತ ಬೆಳವಣಿಗೆಗೆ ಒಳಗಾಗುತ್ತದೆ. ಗೋಮೂತ್ರವು ವ್ಯತ್ಯಾಸಗೊಂಡ ಡಿಎನ್ ಎಯನ್ನು ಸರಿಪಡಿಸುತ್ತದೆ.

- **ಆಂಟಿ ಆಕ್ಸಿಡೆಂಟ್ಸ್–** ರಕ್ತಕಣದಲ್ಲಿರುವ ಆಕ್ಸಿಡೆಂಟ್‌ಗಳು (Oxidant) ಕಾನ್ಸರ್‌ಗೆ ಕಾರಣೀಭೂತವಾಗಿದೆ. ಗೋಮೂತ್ರದಲ್ಲಿರುವ ಆಂಟಿಆಕ್ಸಿಡೆಂಟ್ ಕಾನ್ಸರ್ ನಾಶಕ ಗುಣ ಹೊಂದಿರುತ್ತದೆ.

– **ಡಾ. ವೈ.ವಿ. ಕೃಷ್ಣಮೂರ್ತಿ**

## ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿಯವರಿಗೆ ಉತ್ಕೃಷ್ಟ ಸಮ್ಮಾನ

ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ ನವದೆಹಲಿಯಲ್ಲಿ ೧೪–೧೦–೦೭ ಭಾನುವಾರ ಸಂಜೆ ಭಾರತ್ ವಿಕಾಸ್ ಪರಿಷತ್‌ನ ರಾಷ್ಟ್ರ ಮಟ್ಟದ **'ಉತ್ಕೃಷ್ಟ ಸಮ್ಮಾನ'**ವನ್ನು ಸ್ವೀಕರಿಸಿದರು. ಗೋ ಹತ್ಯಾ ನಿಷೇಧದ ಪರವಾಗಿ ಭಾರತದ ಸರ್ವೋಚ್ಚ ನ್ಯಾಯಾಲಯ ತೀರ್ಪನ್ನು ಕೊಟ್ಟಿರುವುದು, ಗೋ ಸಂರಕ್ಷಣೆ ಮಾಡುವಲ್ಲಿ ದಿಟ್ಟ ಹೆಜ್ಜೆಯೆಂದು ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ ಹೇಳಿದರು. ಮಾತನಾಡುತ್ತಾ ಪ್ರಶಸ್ತಿ ಗೋವಿನ ಚರಣಗಳಿಗೆ ಸಮರ್ಪಿತ. ಕಾರಣವಿಷ್ಟೆ, ಗೋವಿಲ್ಲದೇ ಜೀವನವಿಲ್ಲ. ಈ ಎಲ್ಲ ಕೀರ್ತಿಯೂ ಗೋವಿನಿಂದಲೇ ಮತ್ತು ಗೋವಿಗಾಗಿಯೇ. ಹಾಗಿರುವಾಗ, ಕಟ್ಟಕಡೆಯ ಗೋವು ಸುರಕ್ಷಿತವಾಗುವವರೆಗೆ ಮಾನಸಿಕವಾಗಿ ಪ್ರಶಸ್ತಿ ಸ್ವೀಕೃತವಾಗುವುದಿಲ್ಲ.

ಯಾವುದೇ ಮಹಾಪುರುಷರ ಮಲ–ಮೂತ್ರಗಳನ್ನು ಪವಿತ್ರವೆಂದು ಸ್ವೀಕರಿಸುವ ಪರಿಪಾಠವಿಲ್ಲ. ಆದರೆ, ಗೋವಿನ ವಿಷಯದಲ್ಲಿ ಮಾತ್ರ ಹಾಗಲ್ಲ. ಇಂತಹ ಗೋವು ನಮ್ಮಿಂದ ಹೆಚ್ಚಿನದೇನನ್ನೂ ಬಯಸುವುದಿಲ್ಲ. ಸಹಜ ಹುಟ್ಟು, ಸಹಜ ಜೀವನ, ಸಹಜ ಸಾವು ಇಷ್ಟೇ. ಒಟ್ಟಿನಲ್ಲಿ ಹೇಳಬೇಕಾದರೆ ಜೀವಾಧಿಕಾರದ ಹಕ್ಕನ್ನು ಬಯಸುತ್ತದೆ. ಉಪಕರಿಸಲಾಗದಿದ್ದರೂ ಉಪದ್ರವ ಕೊಡುವುದು ಬೇಡ ಎಂದರು.

ಎಲ್ಲ ವಿಷಯಗಳಲ್ಲಿ ವಿದೇಶೀ ವ್ಯಾಮೋಹ ಹೆಚ್ಚಾಗುತ್ತಿದೆ. ನಮ್ಮತನವನ್ನು ಬಿಟ್ಟ, ಸ್ವಾಭಿಮಾನವಿಲ್ಲದ ಬದುಕು ಎಷ್ಟರ ಮಟ್ಟಿಗಿನದು? ಎಂದು ಪ್ರಶ್ನಿಸಿದರು. (ಭಾವಚಿತ್ರ ಪುಟ ೮ರಲ್ಲಿದೆ)

# ಭಾರತೀಯ ಗೋತಳಿಯೇ ಏಕೆ?

### ದೇಶೀ ಗೋವು

* ಪ್ರಕೃತಿ ಸಹಜವಾಗಿ ಭಾರತೀಯ ವಾತವರಣಕ್ಕೆ ಹೊಂದಿಕೊಂಡು ಬೆಳವಣಿಗೆಯಾದವುಗಳು.
* ರೋಗನಿರೋಧಕ ಶಕ್ತಿಯುಳ್ಳದ್ದಾಗಿದೆ.
* ಭಾರತದ ಬಿಸಿಲು,ಚಳಿ,ಮಳೆಗೆ ಒಗ್ಗಿಕೊಂಡಿದೆ.(ಚರ್ಮದಲ್ಲಿ ಬೆವರಿನ ಗ್ರಂಥಿಗಳಿವೆ)
* ಚರ್ಮದಲ್ಲಿ ಜಿಡ್ಡಿನಂತಹ ವಸ್ತು ಸ್ರವಿಸುತ್ತದೆ. ಇದರ ವಾಸನೆಗೆ ನೊಣಗಳು ಓಡುತ್ತವೆ.
* ಬಹುಮುಖೀ ಪ್ರಯೋಜನ-ಹಾಲು,ಗೊಬ್ಬರ,ತೋಟದ ಕೆಲಸಗಳಲ್ಲಿ ಎತ್ತುಗಳು,ಸಾಗಾಟಕ್ಕೆ ಇತ್ಯಾದಿ
* ಆರೋಗ್ಯಪಾಲನೆ,ಸಾಕಾಣಿಕೆಗಳ ಬಗ್ಗೆ ಜನಸಾಮಾನ್ಯರಿಗೆ ಅರಿವಿದೆ. ಹಾಗಾಗಿ ಸ್ವಾವಲಂಬಿತ ಹೈನುಗಾರಿಕೆ.
* ರೋಗಗಳೇ ಕಡಿಮೆಯಾದ್ದರಿಂದ ಔಷಧಿ ಪ್ರಯೋಗಗಳೂ ಕಡಿಮೆ.
* ಕಡಿಮೆ ಪಶು ಆಹಾರ ಸಾಕು.
* ಜೀವಕೋಶಗಳ ಚಟುವಟಿಕೆ ಕ್ರಿಯೆ ನಿಧಾನ. ಹಾಗಾಗಿ ಕಡಿಮೆ ಆಹಾರ ಸಾಕು.
* ಆಹಾರ ಕಡಿಮೆಯಾಗಿ ಸೊರಗಿದರೂ ಆಹಾರ ಸಿಕ್ಕಿದಾಗ ಮೊದಲಿನಂತೆ ಆಗುತ್ತದೆ.
* ಹಾಲಿನಲ್ಲಿ ಹೆಚ್ಚು ಕೊಬ್ಬು, ಸಣ್ಣಕೊಬ್ಬಿನ ಕಣಗಳು(ಸುಲಭವಾಗಿ ಪಚನವಾಗುತ್ತದೆ) ಹೆಚ್ಚು ಅಯೋಡಿನ್ ಮೌಲ್ಯ.
* ಕಡಿಮೆ ಕಲಬೆರಕೆ ಆಹಾರ ಸೇವಿಸುವುದಾದ್ದರಿಂದ ಹಾಲು ಕೂಡ ಉತ್ತಮ ಗುಣಮಟ್ಟದ್ದು.
* ಪಂಚಗವ್ಯ(ಹಾಲು,ಮೊಸರು,ಮೂತ್ರ,ಸಗಣಿ,ತುಪ್ಪ)ಅತ್ಯಂತ ಶ್ರೇಷ್ಠ ಔಷಧಿ.
* ದೇಶೀಯ ತಳಿಗಳೊಳಗೆವಂಶವಾಹಿನಿಯಲ್ಲಿ ಅಲ್ಪ ಪ್ರಮಾಣದವ್ಯತ್ಯಾಸವಿರುತ್ತದೆ. ಹಾಗಾಗಿ ಭಾರತದೊಳಗೆ ಯಾವತಳಿಯನ್ನೂ ಸಾಕಬಹುದು.
* ಗಂಡುಕರುಗಳಿಗೂ ಉತ್ತಮ ಬೆಲೆ ಇದೆ.ಈಗಲೂ ಗ್ರಾಮೀಣ ಸಾರಿಗೆಯ ಶೇ.೭೦ಎತ್ತಿನ ಗಾಡಿಯಲ್ಲೇ ಆಗುತ್ತಿದೆ.
* ಗೋಮೂತ್ರ ಸೇವನೆ ಕ್ಯಾನ್ಸರ್ ನಿವಾರಕ.

### ವಿದೇಶೀ ಗೋವು

* ವಿದೇಶೀ ವಾತಾವರಣ ಹವಾಮಾನಕ್ಕೆ ಹೊಂದಿಕೊಂಡು ಮನುಷ್ಯ ಮಧ್ಯಪ್ರವೇಶದ ಮುಖಾಂತರ ಬೆಳವಣಿಗೆಯಾದವುಗಳು.
* ರೋಗನಿರೋಧಕ ಶಕ್ತಿ ಬಹಳಕಡಿಮೆ.
* ಭಾರತದ ಬಿಸಿಲು, ಮಳೆಗೆ ಹೊಂದಿಕೊಳ್ಳಲು ಕಷ್ಟಪಡುತ್ತವೆ.(ಬೆವರಿನ ಗ್ರಂಥಿಗಳು ಕಡಿಮೆ ಇವೆ)
* ಉದ್ದರೋಮ, ನೊಣ ಹಾವಳಿ ಜಾಸ್ತಿ.
* ಕೇವಲ ಹಾಲಿಗಾಗಿ ಅಥವಾ ಮಾಂಸಕ್ಕಾಗಿ.
* ಹೆಚ್ಚು ಕಡಿಮೆ ಆಸ್ಪತ್ರೆಯ ವಾತಾವರಣ ಕಲ್ಪಿಸಿಕೊಡಬೇಕು. ಹಾಗಾಗಿ ಪರಾವಲಂಬನೆ ಅಗತ್ಯ.
* ರಾಸಾಯನಿಕ ಔಷಧಿ ಪ್ರಯೋಗ, ಕೃತಕ ಪಶು ಆಹಾರ,ಚುಚ್ಚು ಮದ್ದುಗಳ ಬಳಕೆ ನಿರಂತರ.
* ಹೆಚ್ಚು ಪಶು ಆಹಾರ ಬೇಕು.
* ಜೀವಕೋಶಗಳ ಚಟುವಟಿಕೆ ಕ್ರಿಯೆ ಕ್ಷಿಪ್ರ. ಹಾಗಾಗಿ ಹೆಚ್ಚು ಪೌಷ್ಟಿಕಾಂಶಯುಕ್ತ ಆಹಾರ ನಿರಂತರ ಬೇಕು.
* ಆಹಾರ ಕಡಿಮೆಯಾಗಿ ಸೊರಗಿದರೆ ಮತ್ತೆ ಮೊದಲಿನಂತೆ ಆಗಲು ಬಹಳ ಕಷ್ಟ.
* ಕಡಿಮೆ ಕೊಬ್ಬು,ದೊಡ್ಡದೊಡ್ಡ ಕೊಬ್ಬಿನ ಕಣಗಳು.
* ಹೆಚ್ಚಿನ ರಾಸಾಯನಿಕ ಔಷಧಿಪ್ರಯೋಗ ಆಗುವುದರಿಂದ ಕಡಿಮೆ ಗುಣಮಟ್ಟದಹಾಲು ಉತ್ಪತ್ತಿ
* ಈ ಶ್ರೇಷ್ಠ ಗುಣ ಇಲ್ಲ.
* ವಿದೇಶೀಯ ತಳಿಹಾಗೂ ದೇಶೀತಳಿಗಳೊಳಗೆ ವಂಶವಾಹಿನಿಯಲ್ಲಿತುಂಬ ವ್ಯತ್ಯಾಸವಿದೆ. ಹಾಗಾಗಿ ನಮ್ಮೂರಿನ ಹವಾಮಾನಕ್ಕೆ ಹೊಂದಿಕೊಳ್ಳಲುಕಷ್ಟವಾಗುತ್ತದೆ.
* ಗಂಡುಕರುಗಳು ನಿಷ್ಪ್ರಯೋಜಕ.
* ಹಾಲು, ಮಾಂಸಗಳ ಸೇವನೆಯಿಂದ ಕ್ಯಾನ್ಸರ್ ಬರಬಹುದು.

## ಕ್ಷೀರಪಾನ ಮತ್ತು ಅದರ ಗುಣಗಳು

ಕೆನೆಗಟ್ಟಿದ ಹಾಲಿಗೆ ಸಕ್ಕರೆ ಸೇರಿಸಿ ಸ್ವಲ್ಪ ಬಿಸಿಯಿರುವಾಗ ಸೇವಿಸಬೇಕು. ಇದು ವೃಷ್ಯ, ಪಿತ್ತಾದಿ ರೋಗನಿವಾರಕ, ಶರೀರ ಬಲವರ್ಧಕವಾಗಿದೆ.

**ಕ್ಷೀರಪಾಕ ಕ್ರಮ:** ಹಾಲನ್ನು ನೀರು ಸೇರಿಸದೇ ಸಣ್ಣಬೆಂಕಿಯಲ್ಲಿಹುಟ್ಟಿನಿಂದ ತಿರುವುತ್ತಾ ಕುದಿಸಬೇಕು.

**ಪಾನಪಾಕ:** ಅರ್ಧಾಂಶ ಕುದಿಸಿದ್ದುಪಾನಪಾಕ, ಮೂರುಭಾಗವು ಲೇಹ್ಯಪಾಕ, ಆರುಭಾಗ ಶೇಷವು ಘಟಿಕಾಪಾಕ,ಅಷ್ಟಾಂಶ ಪಾಕವು ಶರ್ಕರಾ ಪಾಕವೆಂದೂ ಹೇಳಲಾಗಿದೆ.

**ರಸಾಮೃತಪಾನ ನಿರ್ಮಾಣಕ್ರಮ:** ನಾಲ್ಕು ವಿಧವಾದ ಕ್ಷೀರಪಾಕಗಳನ್ನು ನಾಲ್ಕು ಪಾತ್ರೆಗಳಲ್ಲಿ ಪ್ರತ್ಯೇಕವಾಗಿ ಇಡಬೇಕು. ಈ ಹಾಲು ಪಾಕಗಳಿಗೆ ಫಲಪುಷ್ಪಗಳನ್ನು ಹಾಕಬೇಕು. ಪಾನಪಾಕಕ್ಕೆ ಹಲಸಿನಹಣ್ಣನ್ನು ಹಾಕಬೇಕು. ಇದು ನಾಲಗೆಯ ಜಾಡ್ಯವನ್ನು ನಿವಾರಿಸುತ್ತದೆ.

**ದುಗ್ಧಲೇಹ್ಯ ನಿರ್ಮಾಣ ಕ್ರಮ:** ಜಾಜಿ ಮುಂತಾದ ಹೂವನ್ನು ಲೇಹ್ಯಮಯವಾದ ದುಗ್ಧಪಾಕಕ್ಕೆ ಹಾಕಿ ಖರ್ಜೂರದ ಹಣ್ಣನ್ನು ಸೇರಿಸಬೇಕು. ಇದಕ್ಕೆ ಸಂಪಿಗೆ ಪುನ್ನಾಗ ಹೂಗಳನ್ನು ಸೇರಿಸಬೇಕು. (ಕೃಪೆ-ಧರ್ಮಭಾರತೀ)

# ಆಯುರ್ವೇದದಲ್ಲಿ ಗೋವು

ಭಾರತದ ಸಂಸ್ಕೃತಿಯಲ್ಲಿ ಉನ್ನತವಾದ ಸ್ಥಾನವನ್ನು ಅಲಂಕರಿಸಿರುವ ಗೋವು, ಭಾರತೀಯ ವೈದ್ಯ ಪದ್ಧತಿಯಾದ ಆಯುರ್ವೇದದಲ್ಲೂ ಉತ್ಕೃಷ್ಟವಾದ ಸ್ಥಾನವನ್ನೇ ಹೊಂದಿದೆ. ಚಿಕಿತ್ಸಾದೃಷ್ಟಿಯಿಂದ ಗೋವಿನ ಕ್ಷೀರದಿಂದ ಹಿಡಿದು ಅದರ ಉಗುರಿನವರೆಗೆಎಲ್ಲವೂ ಉಪಯುಕ್ತವಾಗಿದೆ.

**ಗೋಕ್ಷೀರ(ಹಸುವಿನ ಹಾಲು)**

ಎಳೆಯ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ಉಪಯುಕ್ತ. ಮಕ್ಕಳಿಗೆ ತಾಯಿಯ ಹಾಲು ಸಾಲದೇ ಹೋದಾಗ ಹಸುವಿನ ಹಾಲನ್ನು ಕುಡಿಸುವುದು ಎಲ್ಲರಿಗೂ ತಿಳಿದ ವಿಷಯವೇ. ಹಾಗೆಯೇ ಬಾಣಂತಿಯು ಹಾಲನ್ನು ಕುಡಿದರೆ ಅದು ಸ್ತನ್ಯವರ್ಧಕವಾಗಿರುತ್ತದೆ. ಮಧುರ ರಸವುಳ್ಳ ಹಾಲು ಶರೀರದ ಪುಷ್ಟಿಗೂ, ಧಾತುಗಳ ವೃದ್ಧಿಗೂ ಕಾರಣವಾಗುತ್ತದೆ. ಹಳೆಯ ಜ್ವರಗಳು, ಮೂತ್ರ ಸರಿಯಾಗಿ ಹೋಗದಿರುವುದು, ಮೂಗಿನಲ್ಲಿ ರಕ್ತ ಸುರಿಯುವುದು, ಕೆಮ್ಮು, ದಮ್ಮು ಮೊದಲಾದ ರೋಗಗಳಲ್ಲಿ ಹಸುವಿನ ಹಾಲು ವಿಶೇಷವಾಗಿ ಪಥ್ಯವಾಗಿದೆ.

ಗೋವಿನ ಬಣ್ಣವೂ ಹಾಲಿನ ಗುಣದ ಮೇಲೆ ಪರಿಣಾಮ ಬೀರುತ್ತದೆ.ಕಪ್ಪು ಹಸುವಿನ ಹಾಲು ಶ್ರೇಷ್ಠ. ವಾತ,ಪಿತ್ತ ಕಫಗಳೆಂಬ ಮೂರು ದೋಷಗಳನ್ನು ಹೋಗಲಾಡಿಸುತ್ತದೆ.

ಹಳದಿ ಬಣ್ಣದ ಹಸುವಿನ ಹಾಲು ವಾತ ಮತ್ತು ಪಿತ್ತಹರ. ಕೆಂಪು ಗೋವಿನ ಹಾಲು ವಾತಹರ. ಬಿಳಿ ಹಸುವಿನ ಹಾಲುಕಫಹರ. ಚಿತ್ರವರ್ಣದಹಸುವಿನ ಹಾಲು ವಾತಹರ. ಬಷ್ಕಯಿಣೀ (೬ತಿಂಗಳ ಕರುವುಳ್ಳ ಹಸು) ಇದರ ಹಾಲು ವಾತಪಿತ್ತಕಫ ಹರ.

ಹಸಿರು ಹುಲ್ಲನ್ನು ತಿಂದು ಶುದ್ಧವಾದ ಆಹಾರಗಳನ್ನು ಸೇವಿಸಿದ ಹಸುವಿನ ಹಾಲು ಉತ್ತಮ ಗುಣಗಳಿಂದ ಕೂಡಿರುತ್ತದೆ. ಹಿಂಡಿ, ಹೊಟ್ಟು ಇತ್ಯಾದಿಗಳಿಂದ ಬೇಡದ ವಸ್ತುಗಳನ್ನೂ ಹಸುವು ತಿಂದಿದ್ದರೆ ಅದರ ಹಾಲು ದೋಷಗಳನ್ನು ಹೆಚ್ಚಿಸುತ್ತದೆ. ತೂಕಡಿಕೆ ಸ್ಥೌಲ್ಯಗಳನ್ನು ಉಂಟುಮಾಡುತ್ತದೆ.

ಹಾಲಿನ ಮೇಲೆ ಬರುವ ನೊರೆ ಅಗ್ನಿಮಾಂದ್ಯವುಳ್ಳವರಿಗೆ ಸುಲಭವಾಗಿ ಜೀರ್ಣಿಸುವುದಲ್ಲದೆ ಬಲಕರ ಹಾಗೂ ಉತ್ಸಾಹವರ್ಧಕ.

ಕರೆದಂತೆ ಬಿಸಿಯಾಗಿರುವ ಹಸುವಿನ ಹಾಲು ಕುಡಿಯಲು ರುಚಿಕರ ಹಾಗೂ ಶ್ರೇಷ್ಠ.

"ಓಜಸ್ಸಿಗೆ ಸಮಾನವಾದ ಹಾಲು ಓಜಸ್ಸನ್ನು ಹೆಚ್ಚಿಸುವ ರಸಾಯನವಾಗಿದೆ. ಜೀವವನ್ನು ತುಂಬುವ ಜೀವನೀಯವೆಂಬ ಔಷಧಗಳಲ್ಲಿ ಹಾಲೇ ಶ್ರೇಷ್ಠ" ಎಂದು ಚರಕಾಚಾರ್ಯರು ಹೇಳಿದ್ದಾರೆ.

**ಸಂತಾನಿಕಾ(ಹಾಲಿನ ಕೆನೆ):** ಪಿತ್ತ ಹಾಗೂ ವಾತದೋಷಗಳನ್ನು ಹೋಗಲಾಡಿಸಿ, ಪೌರುಷವನ್ನು ಹೆಚ್ಚಿಸುತ್ತದೆ. ಆದರೆ ಜೀರ್ಣಿಸುವುದು ಕಷ್ಟವಾದ್ದರಿಂದ ಮಿತವಾಗಿ ಉಪಯೋಗಿಸಬೇಕು.

**ದಧಿ (ಮೊಸರು):** ಹಸುವಿನ ಮೊಸರು ಶರೀರಕ್ಕೆ ಬಲಕರ, ಪಾಕವಾಗುವಾಗ ಮಧುರವಾಗುತ್ತದೆ. ರುಚಿಯನ್ನುಂಟುಮಾಡುತ್ತದೆ. ಅಗ್ನಿವೃದ್ಧಿಯನ್ನುಂಟುಮಾಡುತ್ತದೆ. ವಾತಹರವೂ ದೇಹಪುಷ್ಟಿಕರವೂ ಆಗಿದೆ.

ಮೊಸರಿಗೆ ಸಕ್ಕರೆ ಸೇರಿಸಿ ಸೇವಿಸಿದರೆ ರಕದೋಷ ಹಾಗೂ ಪಿತ್ತದೋಷಗಳನ್ನು ಹೋಗಲಾಡಿಸಿ ಮೈ ಉರಿಯನ್ನು ಕಡಿಮೆ ಮಾಡುತ್ತದೆ. ಬೆಲ್ಲದೊಡನೆ ಮೊಸರನ್ನು ಸೇವಿಸಿದರೆ ವಾತದೋಷವನ್ನು ನಾಶಮಾಡಿ ಪೌರುಷವನ್ನು ಹೆಚ್ಚಿಸಿ ತೃಪ್ತಿಯನ್ನುಂಟುಮಾಡುತ್ತದೆ.

ಮೂತ್ರ ಪ್ರವೃತ್ತಿ ಕಷ್ಟವಾದಾಗ , ಹಳೆಯ ನೆಗಡಿ, ವಿಷಮ ಜ್ವರ, ಅತಿಸಾರ, ದೇಹದ ಕೃಶಕ್ವವಿದ್ದಾಗ ಮೊಸರು ಉತ್ತಮ.

**ಮಸ್ತು:** ಮೊಸರಿನ ಮೇಲೆ ನಿಲ್ಲುವ ತಿಳಿನೀರಿಗೆ ಮಸ್ತು ಎಂದು ಹೆಸರು. ಇದು ಶರೀರದ ಆಯಾಸವನ್ನು ಹೋಗಲಾಡಿಸುತ್ತದೆ. ಸುಲಭವಾಗಿ ಜೀರ್ಣಿಸುತ್ತದೆ. ಮಲಬದ್ಧತೆಯನ್ನು ಹೋಗಲಾಡಿಸುತ್ತದೆ. ಬಾಯಾರಿಕೆ ಕಫದೋಷ ಹಾಗೂ ವಾತದೋಷಗಳನ್ನು ಪರಿಹರಿಸುತ್ತದೆ.

**ತಕ್ರ (ಮಜ್ಜಿಗೆ):** ಹಸುವಿನ ಮಜ್ಜಿಗೆ ಅಗ್ನಿವರ್ಧಕ, ಬುದ್ಧಿವರ್ಧಕ, ವಾತಪಿತ್ತಕಫ ದೋಷಹರ, ಅತಿಸಾರ,ಮೂಲವ್ಯಾಧಿ, ಚರ್ಮವ್ಯಾಧಿಗಳು ಹಾಗೂ ಕಣ್ಣಿನ ರೋಗಗಳನ್ನು ಹೋಗಲಾಡಿಸುತ್ತದೆ.

**ನವನೀತ(ಬೆಣ್ಣೆ):** ಹೊಸದಾದ ಬೆಣ್ಣೆಯು ಮಕ್ಕಳಿಗೂ ವೃದ್ಧರಿಗೂ ಹಿತಕರ. ಎಳೆಮಕ್ಕಳಿಗೆ ಅಮೃತದಂತೆ. ಆದ್ದರಿಂದಲೇ ಮಗುವು ಹುಟ್ಟಿದ ತಕ್ಷಣ ಅದರ ಅಂಗೈನಲ್ಲಿ ಹೊಸಬೆಣ್ಣೆಯನ್ನು ಹಾಕಿ ಮಗುವಿಗೆ ತಿನ್ನಿಸುವುದು ಬಾಲೋಪಚಾರದಲ್ಲಿ ವಿಹಿತವಾಗಿದೆ.

ಹಸುವಿನ ಬೆಣ್ಣೆಯು ಶೀತವೀರ್ಯವನ್ನು ಹೊಂದಿದೆ. ಶರೀರಕ್ಕೆ ಒಳ್ಳೆಯ ಬಣ್ಣ ಹಾಗೂ ಬಲವನ್ನುಂಟುಮಾಡುತ್ತದೆ. ಅಗ್ನಿವರ್ಧಕ, ವಾತಪಿತ್ತಹರ, ಧಾತುಕ್ಷಯ, ಅತಿಸಾರ ಹಾಗೂ ಕೆಮ್ಮುಗಳನ್ನು ನಿವಾರಿಸುತ್ತದೆ.

**ಘೃತ(ತುಪ್ಪ):** ಹೊಸದಾದ ತುಪ್ಪವು ಬುದ್ಧಿಶಕ್ತಿ, ಶರೀರದ ಕಾಂತಿ,ಜ್ಞಾಪಕಶಕ್ತಿ, ಶರೀರಬಲ, ಒಳ್ಳೆಯ ಸ್ವರ, ಜಠರಾಗ್ನಿಗಳನ್ನು ಹೆಚ್ಚಿಸುತ್ತದೆ.ವಾತಪಿತ್ತಹರ, ವಿಷಹರ, ಕಣ್ಣಿನ ರೋಗಗಳನ್ನು ಹೋಗಲಾಡಿಸಿ ದೃಷ್ಟಿಯನ್ನು ಚುರುಕುಗೊಳಿಸುತ್ತದೆ. ಖಾಯಿಲೆಯಲ್ಲಿ ಅರಿಸಿನ ಹಾಕಿ ಕಾಯಿಸಿದ ತುಪ್ಪ ಉಪಯುಕ್ತವಾಗಿದೆ.

**ಪುರಾಣ ಘೃತ:** ಹತ್ತು ವರ್ಷ ಹಳೆಯದಾದ ತುಪ್ಪಕ್ಕೆ 'ಪುರಾಣ ಘೃತ' ಎಂದು ಹೆಸರು. ಇದು ಮೂರು ದೋಷಗಳನ್ನು ನಿವಾರಿಸುವುದಲ್ಲದೆ ಕಣ್ಣಿನ ಪೊರೆ, ಮೂರ್ಛೆ, ವಾಂತಿ, ಕುಷ್ಠ, ವಿಷ, ಮನೋರೋಗಗಳಾದ ಉನ್ಮಾದ, ಅಪಸ್ಮಾರ ಮುಂತಾದ ಅನೇಕ ರೋಗಗಳನ್ನು ನಾಶಪಡಿಸುತ್ತದೆ.

**ಕುಂಭಸರ್ಪಿ:** ನೂರು ವರ್ಷ ಹಳೆಯದಾದ ತುಪ್ಪಕ್ಕೆ 'ಕುಂಭಸರ್ಪಿ'ಎಂದು ಹೆಸರು. ಇದಕ್ಕಿಂತ ಹಳೆಯದಾದರೆ 'ಮಹಾಸರ್ಪಿ' ಎಂದು ಹೆಸರು. ಈ ಹಳೆಯದಾದ ಘೃತಗಳು ಬಹಳ ಕಠಿಣವಾದ ಹಾಗೂ ಹಳೆಯದಾದ ರೋಗಗಳನ್ನು ಗುಣಪಡಿಸುತ್ತವೆ. ಈ ಘೃತಗಳನ್ನು ಹೊಟ್ಟೆಗೆ ಸೇವಿಸಿದರೆ ಕೆಮ್ಮು, ದಮ್ಮು ಮೊದಲಾದ ರೋಗಗಳನ್ನೂ, ಅಂಜನ ಮಾಡುವುದರಿಂದ ಕಣ್ಣಿನರೋಗಗಳನ್ನೂ, ತಲೆಗೆ ಅಭ್ಯಂಗ ಮಾಡುವುದರಿಂದ ಶಿರೋರೋಗಗಳನ್ನೂ ಗುಣಪಡಿಸುತ್ತದೆ.

**ಗೋಮೂತ್ರ:** ಇದು ಅಗ್ನಿವರ್ಧಕ, ಬುದ್ಧಿವರ್ಧಕ, ಕಫವಾತಹರ, ಹೊಟ್ಟೆನೋವು ಹಾಗೂ ಚರ್ಮರೋಗಗನ್ನು ಹೋಗಲಾಡಿಸುತ್ತದೆ. ರಸೌಷಧಿಗಳ ಶೋಧನೆಗೂ ಗೋಮೂತ್ರವನ್ನು ಬಳಸುವರು.

**ಗೋಮಯ:** ಹಸುವಿನ ಸೆಗಣಿಯು ಕ್ರಿಮಿನಾಶಕ ಗುಣ ಹೊಂದಿರುವುದರಿಂದ ನೆಲವನ್ನು ಸಾರಿಸಲು ಮೊದಲೆಲ್ಲಾ ಉಪಯೋಗಿಸುತ್ತಿದ್ದರು. ಬೆರಣಿಗಳನ್ನು ರಸೌಷಧಿಗಳನ್ನು ಪುಟಪಾಕಲು ಉಪಯೋಗಿಸುತ್ತಾರೆ. ಬೆರಣಿಯ ಭಸ್ಮವು ಚಳಿ, ಜ್ವರ ಇತ್ಯಾದಿಗಳಲ್ಲಿ ವ್ಯೈಶಾಖವನ್ನು ಕಾಪಾಡಲು ಸಹಾಯ ಮಾಡುತ್ತದೆ.

**ಗೊರಸು:** ಹಸುವಿನ ಗೊರಸು ಧೂಪಗಳಲ್ಲಿ ಕ್ರಿಮಿಹರ ಅಥವಾ ರಕ್ಷೋಘ್ನವಾಗಿ ಬಳಸಲ್ಪಡುತ್ತದೆ.

**ಗೋರೋಚನ:** ಹಸುವಿನ ಪಿತ್ತಕೋಶದಲ್ಲಿ ದೊರಕುವ ಗೋರೋಚನವನ್ನು ಗರ್ಭಿಣಿಯರಿಗೆ ಹಾಲಿನ ಜೊತೆ ಕೊಡುವುದರಿಂದ ಮಗು ಆರೋಗ್ಯವಾಗಿ ಬೆಳೆಯುತ್ತದೆ. ಮಕ್ಕಳಿಗೆ ಶೀತಭಾಧೆಗಳಲ್ಲಿ ಗೋರೋಚನವು ಉಪಯುಕ್ತ.

**ಗೋಶೃಂಗ:** ಗೋವಿನ ಕೊಂಬನ್ನು ಶೃಂಗ ಎಂಬ ಯಂತ್ರವಾಗಿ ಮಾಡಿ, ಶರೀರದಿಂದ ರಕ್ತಮೋಕ್ಷಣ ಮಾಡಿಸಿ, ಚಿಕಿತ್ಸೆ ನೀಡಲು ಉಪಯೋಗಿಸುತ್ತಾರೆ.

ಈ ರೀತಿಯಾಗಿ ರೋಗಹರನಾಗಿ, ಸ್ವಸ್ಥರ ಆರೋಗ್ಯ ರಕ್ಷಣೆಯನ್ನು ಮಾಡುತ್ತಾ ಬದುಕಿದ್ದಾಗಲೂ, ಸತ್ತ ಮೇಲೂ ಮಾನವ ಕುಲಕ್ಕೆ ಉಪಕಾರಿಯಾದ ಗೋವು ಆಯುರ್ವೇದ ವೈದ್ಯರಿಗೂ, ಲೋಕದ ಎಲ್ಲ ಜನರಿಗೂ ಸದಾ ಆದರಣೀಯವಾಗಿದೆ.

(ಕೃಪೆ: ಧರ್ಮಭಾರತೀ)



ನವದೆಹಲಿಯ ಆಗಸ್ಟ್ ಕ್ರಾಂತಿ ಮಾರ್ಗ್‌ನ ಕೋ-ಆಪರೇಟಿವ್ ಯೂನಿಯನ್ ಆಡಿಟೋರಿಯಮ್‌ನಲ್ಲಿ ಭಾನುವಾರ ನಡೆದ ಭಾರತ್ ವಿಕಾಸ್ ಪರಿಷತ್‌ನ ಕಾರ್ಯಕ್ರಮದಲ್ಲಿ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿಯವರನ್ನು **'ಉತ್ಕೃಷ್ಟ ಸಮ್ಮಾನ'**ದೊಂದಿಗೆ ಗೌರವಿಸುತ್ತಿರುವ ನ್ಯಾಯಮೂರ್ತಿಗಳಾದ ಡಾ. ಎಮ್. ರಾಮಾಜೋಯಿಸ್ ಮತ್ತು ಆರ್.ಸಿ. ಲಹೋಟಿ (ವರದಿ ಪುಟ ೫ ರಲ್ಲಿದೆ).

ಹಿಂದೆಂದೂ ಈ ನಾಡು ಕಂಡರಿಯದ ಮನಮೋಹಕ ಹಬ್ಬ

# ಕೋಟಿ ನೀರಾಜನ



ಹೃನ್ಮನಗಳಲ್ಲಿ ಉದ್ದೀಪಿಸಿಕೊಳ್ಳುವ ಜಾಗೃತಿಯ ಅತಿ ಸಣ್ಣ ಹಣತೆಯೂ ಜಾಜ್ವಲ್ಯಮಾನವಾಗಿ ದೇಶವನ್ನೇ ಬೆಳಗೀತು. ಬನ್ನಿ, ಅಂಥ ಜಾಗೃತಿಯ ಕಿಡಿ ಹೊತ್ತಿಸಿಕೊಳ್ಳಲು ಇದೇ ಸಕಾಲ. ಚಳುವಳಿಗಳು ಈ ರಾಷ್ಟ್ರ ಜೀವನಕ್ಕೆ ಹೊಸತಲ್ಲ. ಹೋರಾಟಗಳು ಹಾಸು ಹೊಕ್ಕಾದ ನೆಲವಿದು. ಆದರಿದು ವಿಭಿನ್ನ, ವಿಶಿಷ್ಟ.

ಹೌದು, ಈ ದೇಶದ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಅಸ್ತಿತ್ವದ ಪ್ರಶ್ನೆ ಎದುರಾದಾಗ ಅಂದು ಸ್ವಾತಂತ್ರ್ಯ ಸಮರ ಸಾರಿದ್ದೆವು. ಕೊನೆಗೂ 'ಮಾತೆ' ಸ್ವತಂತ್ರಳಾದಳು. ಆದರೆ, ನಾವು ಭಾರತೀಯರಿಗೆ 'ಮಾತೆ' ಕೇವಲ ಪದವಲ್ಲ. ಆಕೆ ಜೀವಾಳ, ಆಕೆಯೇ ಬದುಕು, ಸುತ್ತಲ ಹಸಿರು-ಉಸಿರು, ನೆಲ-ಜಲ, ಗುರು-ಗುರಿ, ಒಟ್ಟಾರೆ ಸಾರಸರ್ವಸ್ವ. ಈ ಪೈಕಿ ಯಾವುದರ ಹಿತಕ್ಕೆ ಧಕ್ಕೆಯಾದರೂ ನಾವದನ್ನು ಸಹಿಸಿಲ್ಲ. ಹೀಗಿದ್ದೂ ಸ್ವಾತಂತ್ರ್ಯೋತ್ತರ ಭಾರತದ ಸುದೀರ್ಘ ಅರವತ್ತು ವರ್ಷಗಳಲ್ಲಿ 'ಗೋಮಾತೆ'ಯ ಮೇಲಿನ ನಿರಂತರ ದೌರ್ಜನ್ಯವನ್ನು ಮೌನವಾಗಿ ಸಹಿಸಿದ್ದೇಕೆ?

ಗೋವು ಈ ದೇಶದ ಜೀವನಾಡಿ. 'ಅಂಬಾ' ಎಂಬ ಅದರ ದನಿ ಅಮ್ಮನಿಗೆ ಅನ್ವರ್ಥ. ಹೆತ್ತಮ್ಮನಂತೇಯೇ ಆಕೆ ನಮ್ಮನ್ನು ಪೊರೆದಿದ್ದಾಳೆ. ಅಮ್ಮನೆದೆ ಬರಿದಾದರೂ ಆಕೆಯ 'ಅಮೃತಧಾರೆ' ಇಂದಿಗೂ ಬತ್ತಿಲ್ಲ. ಒಮ್ಮೆಯೂ ಮುನಿಸು ತೋರಿಲ್ಲ. ಮುಗ್ಧತೆ ಕೊನೆಯಾಗಿಲ್ಲ. ಪ್ರೀತಿ ಸೋತಿಲ್ಲ. ಸೌಂದರ್ಯ, ಸಂಪತ್ತುಗಳು ಇನ್ನೂ ಕ್ಷೀಣಿಸಿಲ್ಲ.

ಇಂಥ ಮಾತೆಗೆಲ್ಲಿದೆ ಸ್ವಾತಂತ್ರ್ಯ? ಸಹಜ ಬದುಕು, ಸಹಜ ಸಾವಿನಿಂದ ವಂಚಿತ ನೂರಾರು ಭಾರತೀಯ ಗೋತಳಿಗಳು ಇಂದು ವಿನಾಶ ಕಂಡಿವೆ. ಅಳಿದುಳಿದ ಕೆಲವೂ ಅಪಾಯದಂಚಿನಲ್ಲಿವೆ. ಇವನ್ನಾದರೂ ಉಳಿಸಿಕೊಳ್ಳಬೇಡವೇ?

**ಕರುಣೆಯ ದೀಪವನ್ನು ಬೆಳಗುವ ಈ ಮಂಗಳ ಮಹೋತ್ಸವಕ್ಕೆ**

**ಬನ್ನಿ........ ಭಾಗವಹಿಸಿ.......... ಪಾವನರಾಗಿ...........**

**ಕಾಲ : ೧೮-೧೧-೨೦೦೭ ಭಾನುವಾರ ಮಧ್ಯಾಹ್ನ ೨-೦೦ ರಿಂದ ರಾತ್ರಿ೮-೦೦**

**ದೇಶ : ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಂಗಳೂರು**

ಸೂಚನೆ: ಮಹಿಳೆಯರು, ಸಿದ್ಧಪಡಿಸಿದ ಐದು ಹಣತೆಗಳು ಮತ್ತು ಆರತಿ ತಟ್ಟೆಯೊಂದಿಗೆ ಬರಬೇಕಾಗಿ ವಿನಂತಿ.